ದೂರವಾಣಿ/ಫ್ಯಾಕ್ಸ್080-23343464
Email ID – dcfurban82@yahoo.co.in

ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ
ಬೆಂಗಳೂರು ನಗರ ವಿಭಾಗ, ಅರಣ್ಯ ಭವನ ಸಂಕೀರ್ಣ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003
Office of the Deputy Conservator of Forests
Bangalore Urban Division, Aranya Bhavan Annexe. 18th cross, Malleshwaram, Bangalore-560003

ಸಂಖ್ಯೆ: ಎ7.ಭೂಮಿ.ಗುತ್ತಿಗೆ.ಬಿಡಬ್ಲ್ಯೂಎಸ್ಎಸ್ಬಿ.ಸಿಆರ್–23 /2021–22 ದಿನಾಂಕ: 10.01.2022

**ಅತ್ಯಂತ ತುರ್ತು**

ಇವರಿಗೆ

The Executive Engineer,
Kaveri-1 Division, Kapila Bhavan,
11th Main Jayanagar 4th 'T' Block,
Bangalore – 560 041.

ಮಾನ್ಯರೆ,

ವಿಷಯ : Work of construction of Kadugodi GLR (Ground Level Reservoir) in 2.4281 ha of forest land at Kadugodi Plantation Village, Sy.No.1/p. Bidarahalli Hobli, Bangalore East Taluk, Bangalore Urban Dist., under Contract Package-12 of Cauvery Water Supply Scheme (CWSS) Stage-V Project, JICA Funded in favour of Bangalore Water Supply and Sewerage Board regarding. Forest Clearance No.FP/KA/WATER/48609/2020.

ಉಲ್ಲೇಖ :
1) ತಮ್ಮ ಕಛೇರಿ ಪತ್ರ ಸಂಖ್ಯೆ:BWSSB/EE(K-1)-2/AE/CP-12/597/2021-22 dated: 22.10.2021.
2) ಈ ಕಛೇರಿ ಸಮ ಸಂಖ್ಯೆ ಪತ್ರ ದಿನಾಂಕ: 16.11.2021.
3) ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ದಕ್ಷಿಣ ಉಪ ವಿಭಾಗ ಇವರ ಕಛೇರಿ ಪತ್ರ ಸಂಖ್ಯೆ: ಸಅಸ(ದ).ಕಾಡುಗೋಡಿ.ಸಿಆರ್–436/2021–22 ದಿನಾಂಕ: 04.12.2021.

*.*.*

ಬಿ.ಬಿ.ಎಂ.ಪಿ. ವಲಯ ವ್ಯಾಪ್ತಿಯ 110 ಗ್ರಾಮಗಳಿಗೆ ನೀರು ಸರಬರಾಜಿಗಾಗಿ 48ML GLR (Ground Level Reservoir)ಗಾಗಿ 2.4281 ಹೆ. ಅರಣ್ಯ ಪ್ರದೇಶವನ್ನು ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ ಕಾಡುಗೋಡಿ ಪ್ಲಾಂಟೇಶನ್ ಸರ್ವೆ ನಂ.1/ಪಿ ಯಲ್ಲಿ ಬಿಡುಗಡೆ ಮಾಡುವ ಕುರಿತು ಅರಣ್ಯ (ಸಂರಕ್ಷಣಾ) ಕಾಯ್ದೆ 1980ರನ್ವಯ ಉಲ್ಲೇಖ(1)ರ ಪತ್ರದಲ್ಲಿ ತಾವು ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಅದರಂತೆ ಉಲ್ಲೇಖ(2)ರ ಈ ಕಛೇರಿ ಪತ್ರದಲ್ಲಿ ಸ್ಥಳ ಪರಿಶೀಲನೆ ಮಡಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಮುಖಾಂತರ ವರದಿ ಸಲ್ಲಿಸಲು ವಲಯ ಅರಣ್ಯಾಧಿಕಾರಿ, ಕೆ.ಆರ್.ಪುರ ವಲಯ ಇವರಿಗೆ ಸೂಚಿಸಲಾಗಿತ್ತು.

ಅದರಂತೆ ವಲಯ ಅರಣ್ಯಾಧಿಕಾರಿ, ಕೆ.ಆರ್.ಪುರ ವಲಯ ಇವರು ಸ್ಥಳ ಪರಿಶೀಲನೆ ಮಾಡಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಮುಖಾಂತರ ಉಲ್ಲೇಖ(3)ರಲ್ಲಿ ವರದಿ ಸಲ್ಲಿಸಿರುತ್ತಾರೆ. ಸದರಿ ರವರು ಸಲ್ಲಿಸಿರುವ ವರದಿ ಅನ್ವಯ ಮೇಲೆ ಪ್ರಸ್ತಾಪಿತ ಕಾಮಗಾರಿಗೆ ಕೋರಿರುವ ಪ್ರದೇಶವು ಕಾಡುಗೋಡಿ

ಕಾಯ್ದಿಟ್ಟ ಅರಣ್ಯ ಪ್ರದೇಶದ ಒಳಗೆ ಬರುತ್ತಿದ್ದು, ಸದರಿ ಸ್ಥಳದಲ್ಲಿ ನೇಡುತೋಪು ಹಾಗೂ ಸ್ವಾಭಾವಿಕ ಕಾಡುಜಾತಿಯ/ಶ್ರೀಗಂಧದ ಮರ ಗಿಡಗಳಿಂದ ಕೂಡಿದ್ದು, ಅನೇಕ ಪ್ರಭೇಧದ ಪ್ರಾಣಿ-ಪಕ್ಷಿ ಹಾಗೂ ಸರೀಸೃಪ ಜೀವ ಸಂಕುಲದಿಂದ ಕೋಡಿರುವುದಾಗಿ ತಿಳಿಸಿರುತ್ತಾರೆ. ಕಾಡುಗೋಡಿ ಪ್ಲಾಂಟೇಶನ್ ಸರ್ವೆ ನಂ.1ರ ಮೀಸಲು ಅರಣ್ಯ ಪ್ರದೇಶದ ಸುಮಾರು 22.08 ಎಕರೆ ಪ್ರದೇಶದಲ್ಲಿ 2020-21ನೇ ಸಾಲಿನಲ್ಲಿ 'ಮಿಷನ್ ಬೆಂಗಳೂರು' ಕರ್ನಾಟಕ ಯೋಜನೆಯಡಿ ವೃಕ್ಷೋಧ್ಯಾನವನ್ನು ನಿರ್ಮಾಣ ಮಾಡಲಾಗಿ ಮಾನ್ಯ ಮುಖ್ಯ ಮಂತ್ರಿಗಳಿಂದ ಈಗಾಗಲೇ ಉದ್ಘಾಟನೆ ಮಾಡಲಾಗಿರುತ್ತದೆ.

ತಮ್ಮ ಇಲಾಖೆಯ ಅಧಿಕಾರಿಗಳು ಹಾಗೂ ಈ ಕೆಳಸಹಿದಾರರು, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ದಕ್ಷಿಣ ವಿಭಾಗ, ವಲಯ ಅರಣ್ಯಾಧಿಕಾರಿ, ಕೆ.ಆರ್.ಪುರ ವಲಯರವರೊಂದಿಗೆ ಸ್ಥಳ ಪರಿಶೀಲನೆ ಮಾಡಿದ್ದು, ಸದರಿ ಪ್ರದೇಶಕ್ಕೆ ಬದಲಾಗಿ ಅರಣ್ಯ ಪ್ರದೇಶದಲ್ಲಿ ಪರ್ಯಾಯ ಸ್ಥಳವನ್ನು ಸೂಚಿಸಿದ್ದು, ಸದರಿ ಸ್ಥಳದ ಜಿ.ಪಿ.ಎಸ್.ರೀಡಿಂಗ್ ನೊಂದಿಗೆ ನಕ್ಷೆಯನ್ನು ಬದಲಾಯಿಸಿ Hard Copyಯನ್ನು ಈ ಕಛೇರಿಗೆ ಸಲ್ಲಿಸಲು ಕೋರುತ್ತಾ online linkನ್ನು ನಿಮ್ಮ web portalಗೆ ಕಳುಹಿಸುತ್ತಾ ನಕ್ಷೆಯನ್ನು upload ಮಾಡಬೇಕಾಗಿ ಕೋರಲಾಗಿದೆ.

ತಮ್ಮ ವಿಶ್ವಾಸಿ

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೆಂಗಳೂರು ನಗರ ವಿಭಾಗ, ಬೆಂಗಳೂರು